ಆದರೂ ಇದನ್ನು ಸುಮ್ಮನೆ ಬಿಡುವಂತೆಯೂ ಇಲ್ಲ ಎಂದು ಯೋಚಿಸಿದ. ಸೂಕ್ತ ಸಂದರ್ಭದಲ್ಲಿ ಈ ವಿಷಯವನ್ನು ಪ್ರಭುಗಳಲ್ಲಿ ಪ್ರಸ್ತುತ ಮಾಡಿದನು. ಅದಕ್ಕೆ ರಾಜ ವಿಕ್ರಂ ಸಿಂಹ 'ಒಬ್ಬ ಸೈನಿಕನ ಸಮಸ್ಯೆ ನಿರ್ವಹಣೆ ಮಾಡಲು ಸಾಧ್ಯವಾಗದ ಮೇಲೆ ನೀವೆಂತಹ ಸೇನಾನಾಯಕರು? ಸಣ್ಣಪುಟ್ಟ ವಿಚಾರಗಳನ್ನು ನಿಮ್ಮ ಸ್ವಯಂ ವಿವೇಚನೆಯಿಂದ ನಿಮ್ಮ ಮಟ್ಟದಲ್ಲಿಯೆ ಬಗೆಹರಿಸಿಕೊಳ್ಳಿ, ಯಾವುದೇ ಕಾರಣಕ್ಕೂ ಸೈನಿಕರಿಗೆ ಅನ್ಯಾಯ ಆಗಬಾರದು ಅವರ ಕುಟುಂಬಕ್ಕೂ ಕಿಂಚಿತ್ ತೊಂದರೆ ಆಗಬಾರದು' ಎಂದು.ಆದೇಶ ನೀಡಿದನು

ಸಿರಿವೆನ್ನೆಲಾ ರಾಜ್ಯದ ವಾಯವ್ಯ ಭಾಗದ ಪಕ್ಕದ ರಾಜ್ಯದ ರಾಜ ಆದಿತ್ಯ ಭಾತ್ರ ಸೈನ್ಯದೊಂದಿಗೆ ದಾಳಿ ಮಾಡಿದನು. ಸೇನಾನಾಯಕ ಅವರ ದಾಳಿ ಹಿಮ್ಮೆಟಿಸಲು ಸೇನೆಯ ಸಜ್ಜುಗೊಳಿಸುತ್ತಿದ್ದರು. ಸೋಹನ್ ಲಲ್ಲಾ ಆರೋಗ್ಯ ಸರಿ ಇಲ್ಲವೆಂದು ತನ್ನ ಹೆಂಡತಿ ಮೂಲಕ ರಜಾಪತ್ರ ರವಾನಿಸಿದ. ಗಂಗೊಂಡರಾಮ 'ನೋಡಮ್ಮ ಶತ್ರುಗಳು ದಾಳಿ ಮಾಡಿದ್ದಾರೆ. ಯುದ್ಧಕ್ಕೆ ಕೂಡಲೇ ಹೊರಡಬೇಕು ಇಂಥ ಸಂಕಟ ಕಾಲದಲ್ಲಿ ಕೈ ಕೊಟ್ಟರೆ ಆತ ಸೈನ್ಯದಲ್ಲಿ ಇದ್ದು ಏನು ಪ್ರಯೋಜನ? ಈಗಲೆ ಸೈನ್ಯ ಸೇರಿಕೊಳ್ಳಲು ತಿಳಿಸು' ಅಂತ ಹೇಳಿ ಕಳುಹಿಸಿದ. ಮನೆಗೆ ಹಿಂತಿರುಗಿ ಬಂದ ಆಕೆ ತನ್ನ ಗಂಡನಿಗೆ ವಿಷಯ ತಿಳಿಸಿದಳು. ಅದಕ್ಕೆ ಕೆಂಡಮಂಡಲವಾದ ಸೋಹನ್ ಲಲ್ಲಾ 'ರಜಾಪತ್ರ ಬಿಸಾಕಿ ಬಾರದೆ ಇಲ್ಲಿ ಬಂದು ತುತ್ತೂರಿ ಊದುತ್ತಿದ್ದೀಯಾ' ಅಂತ ರೇಗಾಡಿದ. ಆಕೆಯ ಹಿಂದೆಯೇ ಬಂದಿದ್ದ ಇಬ್ಬರು ಸೈನಿಕರು ಆತನನ್ನು ಕರೆದುಕೊಂಡು ಹೋದರು. ಬಲವಂತವಾಗಿ ಯುದ್ಧಕ್ಕೆ ಕರೆದುಕೊಂಡು ಹೋಗುವುದು ಉಚಿತ ಅಲ್ಲ, ಎಂಬ ತತ್ವವನ್ನು ಪಾಲಿಸುತ್ತಿದ್ದ ಸೇನಾನಾಯಕ ಸೋಹನ್ ಲಲ್ಲಾ ನನ್ನ ದ್ವಾರಪಾಲಕನಾಗಿ ನೇಮಿಸಿ ಸೈನ್ಯದೊಂದಿಗೆ ಯುದ್ಧಕ್ಕೆ ಹೊರಟರು. ಇಂತಹ ಸಮಯಕ್ಕೆ ಕಾಯುತ್ತಿದ್ದ ಡಕಾಯಿತರ ಗುಂಪೊಂದು ಸೇನಾ ಪ್ರದೇಶದ ಮೇಲೆ ಕಳ್ಳತನಕ್ಕೆ ಬಂದಿತು.

ದ್ವಾರಪಾಲಕನಾಗಿದ್ದ ಸೋಹನ್ ಲಲ್ಲಾ ನನ್ನ ಮಾರಕಾಸ್ತ್ರಗಳಿಂದ ಕೊಚ್ಚಿ ಹಾಕಿದರು. ಆ ಪ್ರದೇಶದಲ್ಲಿ ಸಿಕ್ಕ ಸಾಮಾಗ್ರಿಗಳನ್ನು ದೋಚಿ ಪರಾರಿ ಆದರು. ವಿಷಯ ತಿಳಿದ ಹೆಂಡತಿ ಆತನ ಶವದ ಮುಂದೆ ದುಃಖಪಡುತ್ತಿದ್ದಳು. ಅಲ್ಲಿಗೆ ಬಂದ ಜನ 'ಈತನ ಮರಣವೂ ವೀರಮರಣವಾಗದೆ ಘೋರ ಮರಣವಾಯಿತಲ್ಲ' ಅಂತ ಮಾತಾನಾಡಿಕೊಂಡರು.

ಕಾರಣ ಏನೆಂದರೆ ಆತ ಡಕಾಯಿತರೊಂದಿಗೆ ಸೆಣಸಾಡದೆ ಪರಾಯಾಗಲು ಯತ್ನ ಮಾಡಿದ್ದ. ಆದರೆ ಕಳ್ಳರ ಗ್ಯಾಂಗ್ ಆತನನ್ನು ಹಿಡಿದು ಕೊಂದಿದ್ದರು. ■




# ಪುಟಾಣಿ ಕಿನ್ನರಿ ಕವಿತಾ

**■ ರಾಧೇಶ ತೋಳ್ಪಾಡಿ**

ಅದೊ ಅದೊ ಬಂದಳು ಚಂಗನೆ ಜಿಗಿಯುತ
ಕಿನ್ನರಿ ಪುಟಾಣಿ ಕವಿತಾ
ಕನ್ನಡ ಶಾಲೆಯ ಬಯಲಲಿ ಆಹಾ
ಇವಳದು ಹೊಸ ಬಗೆ ಕುಣಿತ!

ಶಾರದೆ ಬ್ರಹ್ಮರ ಮುದ್ದಿನ ಮಗಳು
ಹೊಸ ಕಾಲದ ಸವಿ ಸವಿತಾ
ಶಿಶು ಪ್ರಾಸಗಳ ಚಿಗುರೆಲೆ ಹೆಜ್ಜೆಯ
ಗೆಜ್ಜೆಯ ಘಲ್ ಘಲ್ ಉಲಿತ.

ಶರ ತಲ ಜಲ ಷಟ್ಪದಿಗಳ ಕೈ ಬಳೆ
ಕಿಂಕಿಣಿ ನಾದದ ಮೋಡಿ
ಹಸುಗೂಸುಗಳನು ಮಲಗಿಸಲೆಂದೇ
ಜೋಗುಳ ಹಾಡಿನ ಲಾಲಿ.

ಕಥನ ಕವನಗಳ ಲಂಗ ದಾವಣಿಯ
ತೊಟ್ಟರೆ ರಾಜಕುಮಾರಿ
ಜನಪದ ಹಾಡಿನ ಹಾಫ್ ಸಾರೀಲಿ
ಅಪ್ಪಟ ಅಪ್ಸರೆ ಕುವರಿ.
ಕಿನ್ನರಿ ಇವಳೈ!ನರ್ಸರಿ ರೈಮಿನ
ಬಣ್ಣದ ಫ್ರಾಕನು ಧರಿಸಿ
ನಾನ್ ಸೆನ್ಸ್ ರೈಮು ಕಿವಿಯಲ್ಲಾಡುವ
ಚಕಮಕ ಹೊಳೆಯುವ ಝುಮುಕಿ.

ಹನಿಗವಿತೆಗಳ ಬಿಡಿ ಬಿಡಿ ಹೂವನು
ಮುಡಿವಳು ಎರಡೂ ಜಡೆಗೆ
ರಂಗ ಗೀತೆಗಳ ಘಾಗ್ರಾ, ಚೋಲಿ
ನಿರಿಗೆಯ ಚಿಮ್ಮಿಸಿ ನಡಿಗೆ!

ಭಾವಗೀತೆಗಳ ಬುಗ್ಗೆಯ ರವಿಕೆ
ನಿಸರ್ಗ ಗೀತೆ ಷರಾರಾ!
ನಾಡನು ನೆನೆಯುವ ಗೇಯ ಗೀತೆಗಳು
ತರಳೆಯ ದೋಣಿ ವಿಹಾರ!

ಇಳಿವಳು ಕಲ್ಪನೆ ರೆಕ್ಕೆಯ ವಾಲಿಸಿ
ತೇಲಿಸಿ ಕಿನ್ನರಿ ಕವಿತಾ
ಮಕ್ಕಳ ಮೊಗದಲಿ ಹರುಷವನುಕ್ಕಿಸಿ
ನಿಲುವಳು ಕಿಲಿ ಕಿಲಿ ನಗುತಾ! ■